# ಕರ್ನಾಟಕ ರಾಜ್ಯಪತ್ರ

**ಅಧಿಕೃತವಾಗಿ ಪ್ರಕಟಿಸಲಾದುದು**

**ವಿಶೇಷ ರಾಜ್ಯ ಪತ್ರಿಕೆ**

| ಭಾಗ – ೪ಎ<br>Part – IVA | ಬೆಂಗಳೂರು, ಬುಧವಾರ, ೧೩ ಆಗಸ್ಟ್, ೨೦೨೫ (ಶ್ರಾವಣ ೨೨, ಶಕವರ್ಷ ೧೯೪೭)<br>BENGALURU, WEDNESDAY, 13 AUGUST, 2025 (SHRAVANA 22, SHAKAVARSHA 1947) | ನಂ. ೪೭೬<br>No.476 |
|---|---|---|


**ಕರ್ನಾಟಕ ವಿಧಾನಸಭೆ**

**ಹದಿನಾರನೇ ವಿಧಾನಸಭೆ**

**ಏಳನೇ ಅಧಿವೇಶನ**

## ಕರ್ನಾಟಕ ಅಂತರ್ಜಲ (ಅಭಿವೃದ್ಧಿ ಮತ್ತು ನಿರ್ವಹಣೆಯ ವಿನಿಯಮನ ಹಾಗೂ ನಿಯಂತ್ರಣ) (ತಿದ್ದುಪಡಿ) ವಿಧೇಯಕ, 2025

**(2025ರ ವಿಧಾನಸಭೆಯ ವಿಧೇಯಕ ಸಂಖ್ಯೆ–43)**

ಕರ್ನಾಟಕ ಅಂತರ್ಜಲ (ಅಭಿವೃದ್ಧಿ ಮತ್ತು ನಿರ್ವಹಣೆಯ ವಿನಿಯಮನ ಹಾಗೂ ನಿಯಂತ್ರಣ) ಅಧಿನಿಯಮ 2011ನ್ನು ಮತ್ತಷ್ಟು ತಿದ್ದುಪಡಿ ಮಾಡಲು ಒಂದು ವಿಧೇಯಕ.

ಇಲ್ಲಿ ಇನ್ನುಮುಂದೆ ಕಂಡುಬರುವ ಉದ್ದೇಶಗಳಿಗಾಗಿ ಕರ್ನಾಟಕ ಅಂತರ್ಜಲ (ಅಭಿವೃದ್ಧಿ ಮತ್ತು ನಿರ್ವಹಣೆಯ ವಿನಿಯಮನ ಹಾಗೂ ನಿಯಂತ್ರಣ) ಅಧಿನಿಯಮ, 2011ರ (2011ರ ಕರ್ನಾಟಕದ ಅಧಿನಿಯಮ 25) ತಿದ್ದುಪಡಿ ಮಾಡುವುದು ಯುಕ್ತವಾಗಿರುವುದರಿಂದ;

ಇದು ಭಾರತ ಗಣರಾಜ್ಯದ ಎಪ್ಪತ್ತಾರನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ:-

**1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ.-** (1) ಈ ಅಧಿನಿಯಮವನ್ನು, ಕರ್ನಾಟಕ ಅಂತರ್ಜಲ (ಅಭಿವೃದ್ಧಿ ಮತ್ತು ನಿರ್ವಹಣೆಯ ವಿನಿಯಮನ ಹಾಗೂ ನಿಯಂತ್ರಣ) (ತಿದ್ದುಪಡಿ) ಅಧಿನಿಯಮ, 2025 ಎಂದು ಕರೆಯತಕ್ಕದ್ದು.

(2) ಇದು ಈ ಕೂಡಲೇ ಜಾರಿಗೆ ಬರತಕ್ಕದ್ದು .

**2. ಪ್ರಕರಣ 3ರ ತಿದ್ದುಪಡಿ.-** ಕರ್ನಾಟಕ ಅಂತರ್ಜಲ (ಅಭಿವೃದ್ಧಿ ಮತ್ತು ನಿರ್ವಹಣೆಯ ವಿನಿಯಮನ ಹಾಗೂ ನಿಯಂತ್ರಣ) ಅಧಿನಿಯಮ, 2011 (ಇಲ್ಲಿ ಇನ್ನುಮುಂದೆ ಮೂಲ ಅಧಿನಿಯಮವೆಂದು ಉಲ್ಲೇಖಿಸಲಾಗಿದೆ)ರ 3ನೇ ಪ್ರಕರಣದ (3)ನೇ ಉಪಪ್ರಕರಣದಲ್ಲಿ,-

(i) ಖಂಡ (ಎ)ರ ಬದಲಾಗಿ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:-

"(ಎ) ಸರ್ಕಾರದ ಕಾರ್ಯದರ್ಶಿ, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ, ಕರ್ನಾಟಕ ಸರ್ಕಾರ, ಇವರು ಅಧ್ಯಕ್ಷರಾಗಿರತಕ್ಕದ್ದು."

(ii) ಖಂಡ (ಬಿ)ರ ಬದಲಾಗಿ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:-

"(ಬಿ) ನಿರ್ದೇಶಕರು, ಅಂತರ್ಜಲ ನಿರ್ದೇಶನಾಲಯ, ಇವರು ಸದಸ್ಯ ಕಾರ್ಯದರ್ಶಿಯಾಗಿರತಕ್ಕದ್ದು."

(iii) ಖಂಡ (ಎಫ್)ರ ಬದಲಾಗಿ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:-

"(ಎಫ್) ಚೀಫ್ ಇಂಜಿನಿಯರ್, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ."

(iv) ಖಂಡ (ಎಚ್)ರ ಬದಲಾಗಿ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:-

"(ಎಫ್) ಚೀಫ್ ಇಂಜಿನಿಯರ್, ದಕ್ಷಿಣ ವಲಯ, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ."

**3. ಪ್ರಕರಣ 11ರ ತಿದ್ದುಪಡಿ.-** ಮೂಲ ಅಧಿನಿಯಮದ 11ನೇ ಪ್ರಕರಣದಲ್ಲಿ,-

(i) ಶೀರ್ಷಿಕೆಗೆ ಬದಲಾಗಿ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:-

"**11. ಅಧಿಸೂಚಿತ ಮತ್ತು ಅಧಿಸೂಚಿತವಲ್ಲದ ಪ್ರದೇಶದಲ್ಲಿ ಅಂತರ್ಜಲವನ್ನು ತೆಗೆಯಲು ಮತ್ತು ಬಳಸಲು ಅನುಮತಿ ನೀಡಿಕೆ.-**"

(ii) ಉಪಪ್ರಕರಣ (1)ರ ಬದಲಾಗಿ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:-

"(1) ಕುಡಿಯುವ ನೀರಿನ ಸಾರ್ವಜನಿಕ ಮೂಲಗಳ ಸಂರಕ್ಷಣೆಗೆ ಸಂಬಂಧಿಸಿದಂತೆ ತತ್ಕಾಲದಲ್ಲಿ ಜಾರಿಯಲ್ಲಿರುವ ಇತರ ಯಾವುದೇ ಕಾನೂನಿನ ಉಪಬಂಧಗಳಿಗೆ ಒಳಪಟ್ಟು, (1ಎ) ಉಪಪ್ರಕರಣದಡಿ ವಿನಾಯಿತಿ ಪಡೆದವರನ್ನು ಹೊರತುಪಡಿಸಿ, ಯಾರೇ ಅಂತರ್ಜಲ ಬಳಕೆದಾರನು, ಪ್ರಾಧಿಕಾರದಿಂದ ಅನುಮತಿ ಪಡೆಯದ ಹೊರತು ಅಥವಾ ಅಥವಾ ನಿರಾಪೇಕ್ಷಣಾ ಪತ್ರವನ್ನು ಸ್ವೀಕರಿಸಿದ ಹೊರತು ಅಧಿಸೂಚಿತ ಅಥವಾ ಅಧಿಸೂಚಿತವಲ್ಲದ ಪ್ರದೇಶದಲ್ಲಿ ಯಾವುದೇ ಉದ್ದೇಶಕ್ಕಾಗಿ ಬಾವಿಯನ್ನು ಕೊರೆಯತಕ್ಕದ್ದಲ್ಲ ಅಥವಾ ತೋಡತಕ್ಕದ್ದಲ್ಲ.

**(1ಎ) ಅನುಮತಿ ಅಥವಾ ನಿರಾಪೇಕ್ಷಣಾ ಪತ್ರ ಪಡೆಯುವದರಿಂದ ವಿನಾಯತಿ ಪಡೆಯಲಾದ ಗ್ರಾಹಕರ ಪ್ರವರ್ಗಗಳು.-** ಹೊಸ ಕೊಳವೆ ಬಾವಿಯನ್ನು ಕೊರೆಯಲು ಅನುಮತಿ ಪಡೆಯುವುದು ಮತ್ತು ಅಂತರ್ಜಲ ತೆಗೆಯಲು ನಿರಾಪೇಕ್ಷಣಾ ಪತ್ರ ಕೋರುವುದರಿಂದ ವಿನಾಯಿತಿಸತಕ್ಕ ಪ್ರವರ್ಗಗಳು ಈ ಮುಂದಿನಂತಿವೆ, ಎಂದರೆ:-

(i) ಕುಡಿಯುವ ನೀರು ಮತ್ತು ಗೃಹ ಬಳಕೆಗಳಿಗೆ ಗ್ರಾಮೀಣ ಮತ್ತು ನಗರ ಪ್ರದೇಶಗಳೆರಡರಲ್ಲೂ ವಯಕ್ತಿಕ ಗೃಹಪಯೋಗಿ ಗ್ರಾಹಕರು;

(ii) ಗ್ರಾಮೀಣ ಕುಡಿಯುವ ನೀರು ಸರಬರಾಜು ಸ್ಕೀಮುಗಳು;

(iii) ಗ್ರಾಮೀಣ ಮತ್ತು ನಗರ ಪ್ರದೇಶಗಳೆರಡರಲ್ಲಿನ ಸಶಸ್ತ್ರ ಪಡೆಯ ಕಾರ್ಯಸಂಸ್ಥೆಗಳು ಮತ್ತು ಕೇಂದ್ರೀಯ ಸಶಸ್ತ್ರ ಪೊಲೀಸ್ ದಳಗಳ ಕಾರ್ಯಸಂಸ್ಥೆಗಳು;

(iv) ಕೃಷಿ ಚಟುವಟಿಕೆಗಳು;

(v) ಅಂತರ್ಜಲ ತೆಗೆಯುತ್ತಿರುವ ಎಲ್ಲಾ ಕೈಗಾರಿಕೆಗಳು ಅಥವಾ ಗಣಿಗಾರಿಕೆ ಪ್ರಾಜೆಕ್ಟ್‌ಗಳು ಅಥವಾ ಮೂಲಸೌಕರ್ಯ ಪ್ರಾಜೆಕ್ಟ್‌ಗಳ ಎಲ್ಲಾ ನಿರ್ಧರಿಸಿದ ಘಟಕಗಳಿಗೆ ಕೇವಲ ಕುಡಿಯುವ ಅಥವಾ ಗೃಹ ಬಳಕೆಯ ಉದ್ದೇಶಗಳಿಗಾಗಿ ಮಾತ್ರ ಪ್ರತಿ ದಿನಕ್ಕೆ 5ಘನ ಮೀಟರ್ ವರೆಗೆ; ಮತ್ತು

(vi) ಕೊರೆಯುತ್ತಿರುವ ಮತ್ತು ತೋಡುತ್ತಿರುವ ವಸತಿ ಅಪಾರ್ಟ್‌ಮೆಂಟ್‌ಗಳು ಮತ್ತು ಗೃಹ ಸಮೂಹ ಸೊಸೈಟಿಗಳು,-

(ಎ) ಕುಡಿಯುವ ಮತ್ತು ಗೃಹ ಬಳಕೆಗಳಿಗಾಗಿ, ಮಾರ್ಗಸೂಚಿಗಳಲ್ಲಿ ನಿರ್ದಿಷ್ಟಪಡಿಸಲಾದ ಷರತ್ತುಗಳಿಗೆ ಒಳಪಟ್ಟು ಪ್ರತಿ ದಿನಕ್ಕೆ 20 ಘನ ಮೀಟರ್‌ಗಳವರೆಗೆ ಅಂತರ್ಜಲವನ್ನು ತೆಗೆಯುವುದು; ಮತ್ತು

(ಬಿ) ಸರ್ಕಾರಿ ಸ್ಕೀಮುಗಳಡಿ ಆರ್ಥಿಕವಾಗಿ ದುರ್ಬಲ ವರ್ಗದವರಿಗಾಗಿರುವ ವಸತಿ ಘಟಕಗಳು.

"(1ಬಿ) ಅಂತರ್ಜಲವನ್ನು ಹೊರತೆಗೆಯುವ ಮತ್ತು ಅದನ್ನು ದೊಡ್ಡ ಪ್ರಮಾಣದಲ್ಲಿ ನೀರು ಸರಬರಾಜುದಾರರಾಗಿ ಸರಬರಾಜು ಮಾಡುವ ಎಲ್ಲಾ ಖಾಸಗಿ ಟ್ಯಾಂಕರ್‌ಗಳು, ಸರ್ಕಾರವು ಅಧಿಸೂಚಿಸಬಹುದಾದಂತೆ ಸಂಬಂಧಪಟ್ಟ ಪ್ರಾಧಿಕಾರದಿಂದ ಅಂತರ್ಜಲ ಹೊರತೆಗೆಯುದಕ್ಕಾಗಿ ನಿರಕ್ಷೇಪಣಾ ಪತ್ರವನ್ನು ಹೊಂದಿರತಕ್ಕದ್ದು."

**4. ಪ್ರಕರಣ 17ರ ತಿದ್ದುಪಡಿ**.- ಮೂಲ ಅಧಿನಿಯಮದ 17ನೇ ಪ್ರಕರಣದ (1)ನೇ ಉಪಪ್ರಕರಣದಲ್ಲಿರುವ (ಜೆ) ಖಂಡದ ತರುವಾಯ ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:-

"(ಜೆ-1) ಅಂತರ್ಜಲ ಹೊರತೆಗೆಯುವುದನ್ನು ವಿನಿಯಮಿಸಲು ಮತ್ತು ನಿಯಂತ್ರಿಸಲು ಕೇಂದ್ರ ಅಂತರ್ಜಲ ಪ್ರಾಧಿಕಾರವು ಹೊರಡಿಸಿದ ಮಾರ್ಗಸೂಚಿಗಳನ್ನು ಸೂಕ್ತ ಮಾರ್ಪಾಡುಗಳೊಂದಿಗೆ ಹೊರಡಿಸತಕ್ಕದ್ದು, ಅಳವಡಿಸಿಕೊಳ್ಳತಕ್ಕದ್ದು ಮತ್ತು ಅಧಿಸೂಚಿಸತಕ್ಕದ್ದು;

(ಜೆ-2) ಈ ಅಧಿನಿಯಮದ ಉದ್ದೇಶಗಳನ್ನು ಕಾರ್ಯಗತಗೊಳಿಸಲು ಯಾವುದೇ ಪ್ರದೇಶಕ್ಕಾಗಿ ಜಿಲ್ಲಾ ಸಮಿತಿ ಅಥವಾ ಯಾವುದೇ ಸಮಿತಿಯನ್ನು ರಚಿಸತಕ್ಕದ್ದು; ಮತ್ತು

(ಜೆ-3) ಅಂತರ್ಜಲದ ಸಮರ್ಪಕ ನಿಯಂತ್ರಣ ಮತ್ತು ಬಳಕೆ ಅಥವಾ ಯಾವುದೇ ಇತರ ವಿಷಯಗಳಲ್ಲಿ ಅವರುಗಳ ಪೈಕಿ ಅಥವಾ ಹೊರಗಿನವರಿಂದ ಪ್ರಾಧಿಕಾರಕ್ಕೆ ಸಲಹೆ ನೀಡಲು ಅಥವಾ ಸಮಾಲೋಚಿಸಲು ಒಂದು ಅಥವಾ ಹೆಚ್ಚಿನ ಸದಸ್ಯರು, ತಜ್ಞರನ್ನು ಹೊಂದಿರುವ ಉಪ-ಸಮಿತಿಯನ್ನು ರಚಿಸತಕ್ಕದ್ದು."

**5. ಪ್ರಕರಣ 18ರ ತಿದ್ದುಪಡಿ.-** ಮೂಲ ಅಧಿನಿಯಮದ 18ನೇ ಪ್ರಕರಣದ ಬದಲಿಗೆ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:-

"(3) ಕೇಂದ್ರ ಅಂತರ್ಜಲ ಪ್ರಾಧಿಕಾರವು ಹೊರಡಿಸಿರುವ ಮಾರ್ಗಸೂಚಿಗಳ ಆಧಾರದ ಮೇಲೆ ವಾಣಿಜ್ಯ, ಕೈಗಾರಿಕೆ, ಗಣಿಗಾರಿಕೆ ಯೋಜನೆಗಳು, ಮೂಲಸೌಕರ್ಯ ಯೋಜನೆಗಳು ಮತ್ತು ಸರ್ಕಾರವು ಅಧಿಸೂಚಿಸಿದಂತೆ ದೊಡ್ಡಪ್ರಮಾಣದ ನೀರು ಸರಬರಾಜಿನ ಬಳಕೆಗಾಗಿ ಹೊರತೆಗೆಯುವ ಅಂತರ್ಜಲದ ಪ್ರಮಾಣದ ಮೇರೆಗೆ ಪ್ರಾಧಿಕಾರವು ಸೂಕ್ತ ದರಗಳನ್ನು ವಿಧಿಸಬಹುದು."

**6. ಪ್ರಕರಣ 32ರ ತಿದ್ದುಪಡಿ.-** ಮೂಲ ಅಧಿನಿಯಮದ 32ನೇ ಪ್ರಕರಣದಲ್ಲಿ,-

(i) ಉಪ-ಪ್ರಕರಣ (1)ರ (ಬಿ) ಖಂಡದ ಬದಲಾಗಿ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು.

(ಬಿ) ಈ ಅಧಿನಿಯಮದ 17ನೇ ಪ್ರಕರಣದ (1)ನೇ ಉಪ-ಪ್ರಕರಣದ (ಎಫ್) ಖಂಡದ ಅಡಿಯಲ್ಲಿ ಯಾವುದೇ ಮಾಹಿತಿ ಅಥವಾ ವಿವರ ಪತ್ರವನ್ನು ಒದಗಿಸಲು ಅಗತ್ಯಪಡಿಸಲಾಗಿದ್ದು,-

(i) ಅಂಥ ಮಾಹಿತಿ ಅಥವಾ ವಿವರಪತ್ರವನ್ನು ಒದಗಿಸಲು ಉದ್ದೇಶ ಪೂರ್ವಕವಾಗಿ ನಿರಾಕರಿಸಿದರೆ ಅಥವಾ ಕಾನೂನು ಬದ್ಧ ಕಾರಣವಿಲ್ಲದೇ ಉಪೇಕ್ಷಿಸಿದರೆ ; ಅಥವಾ

(ii) ಯಾವುದೇ ಮಾಹಿತಿ ಅಥವಾ ವಿವರ ಪತ್ರವನ್ನು ಅದು ಸುಳ್ಳು ಎಂಬುದಾಗಿ ತಿಳಿದೂ ಉದ್ದೇಶ ಪೂರ್ವಕವಾಗಿ ಒದಗಿಸಿದರೆ ಅಥವಾ ಒದಗಿಸಲು ಕಾರಣನಾದರೆ ;

- ಐವತ್ತು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ದಂಡದಿಂದ ದಂಡಿತನಾಗತಕ್ಕದ್ದು. ಉಲ್ಲಂಘನೆಯು ಮುಂದುವರಿದ ಸಂದರ್ಭದಲ್ಲಿ ಮತ್ತು ತರುವಾಯದ ವಿಫಲತೆ ಅಥವಾ ಉಲ್ಲಂಘನೆಯ ಸಂದರ್ಭದಲ್ಲಿ ಅಂಥ ವಿಫಲತೆಯು ಅಥವಾ ಉಲ್ಲಂಘನೆಯು ಮುಂದುವರೆದ ಪ್ರತಿದಿನಕ್ಕೆ ಸಾವಿರ ರೂಪಾಯಿಗಳಿಗೆ ವಿಸ್ತರಿಸಬಹುದಾದ ಹೆಚ್ಚುವರಿ ದಂಡವನ್ನು ವಿಧಿಸತಕ್ಕದ್ದು.

(ii) ಉಪಪ್ರಕರಣ (2)ರಲ್ಲಿರುವ "ಐದು ಸಾವಿರ ರೂಪಾಯಿಗಳವರೆಗೆ" ಎಂಬ ಪದಗಳ ಬದಲಾಗಿ "ಇಪ್ಪತ್ತೈದು ಸಾವಿರ ರೂಪಾಯಿಗಳವರೆಗೆ" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು;

(iii) ಉಪಪ್ರಕರಣ (4)ರಲ್ಲಿರುವ "ಹತ್ತು ಸಾವಿರ ರೂಪಾಯಿಗಳವರೆಗೆ" ಎಂಬ ಪದಗಳ ಬದಲಾಗಿ "ಇಪ್ಪತ್ತೈದು ಸಾವಿರ ರೂಪಾಯಿಗಳವರೆಗೆ" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು; ಮತ್ತು

(iv) ಉಪಪ್ರಕರಣ (4)ರ ತರುವಾಯ ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:-

"(5) ಸಿಂಧುವಾದ ನಿರಾಪೇಕ್ಷಣಾ ಪತ್ರವನ್ನು ಪಡೆಯದ ಹೊರತು ನೀರನ್ನು ತೆಗೆಯುವ ಮತ್ತು ಈ ಅಧಿನಿಯಮದ ಉಪಬಂಧಗಳನ್ನು ಮತ್ತು ಸದರಿ ನಿರಾಕ್ಷೇಪಣಾ ಪತ್ರವನ್ನು ಉಲ್ಲಂಘಿಸುವ ಯಾರೇ ವ್ಯಕ್ತಿಯು ಕೇಂದ್ರ ಅಂತರ್ಜಲ ಪ್ರಾಧಿಕಾರವು ಹೊರಡಿಸಿದ ಮಾರ್ಗಸೂಚಿಗಳ ಆಧಾರದ ಮೇಲೆ ಸೂಕ್ತ ಮಾರ್ಪಾಡುಗಳೊಂದಿಗೆ ಸರ್ಕಾರವು ಅಧಿಸೂಚಿಸಿದಂಥ ದಂಡನೆಗಳೊಂದಿಗೆ ದಂಡಿತನಾಗತಕ್ಕದ್ದು."

## ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆ

ಕರ್ನಾಟಕ ಅಂತರ್ಜಲ (ಅಭಿವೃದ್ಧಿ ಮತ್ತು ನಿರ್ವಹಣೆಯ ವಿನಿಯಮನ ಹಾಗೂ ನಿಯಂತ್ರಣ) ಅಧಿನಿಯಮ, 2011 (2011ರ ಕರ್ನಾಟಕದ ಅಧಿನಿಯಮ 25)ನ್ನು ಈ ಮುಂದಿನವುಗಳಿಗಾಗಿ ತಿದ್ದುಪಡಿ ಮಾಡುವುದು ಅವಶ್ಯಕವೆಂದು ಪರಿಗಣಿಸಲಾಗಿದೆ,-

(i) 2025-26ರ ಆಯವ್ಯಯ ಭಾಷಣವನ್ನು ಜಾರಿಗೊಳಿಸುವುದು;

(ii) ಆಡಳಿತ ಸುಧಾರಣಾ ಆಯೋಗ-2ರ ಶಿಫಾರಸ್ಸುಗಳನ್ನು ಜಾರಿಗೆತರುವುದು;

(iii) ಕೇಂದ್ರ ಅಂತರ್ಜಲ ಪ್ರಾಧಿಕಾರ, ಹೊಸದೆಹಲಿ, ಇವರು ಹೊರಡಿಸಿದ ಮಾರ್ಗಸೂಚಿಗಳನ್ನು ಅಳವಡಿಸಿಕೊಳ್ಳುವುದು; ಮತ್ತು

(iv) ಜನವಿಶ್ವಾಸ್ (ಉಪಬಂಧಗಳ ತಿದ್ದುಪಡಿ) ಅಧಿನಿಯಮ, 2023 (2023ರ ಕೇಂದ್ರಅಧಿನಿಯಮ18)ರ ಅನುಸಾರ ಉಪಬಂಧಗಳನ್ನು ಅಳವಡಿಸಿಕೊಳ್ಳುವುದು.

ಆದ್ದರಿಂದ ಈ ವಿಧೇಯಕ.

## ಆರ್ಥಿಕ ಜ್ಞಾಪನ ಪತ್ರ

ಪ್ರಸ್ತಾವಿತ ಶಾಸನಾತ್ಮಕ ಕ್ರಮವು ಯಾವುದೇ ಹೆಚ್ಚಿನ ವೆಚ್ಚವನ್ನು ಒಳಗೊಂಡಿರುವುದಿಲ್ಲ.

**ಎಸ್. ಎಸ್. ಬೋಸರಾಜು**
ಸಣ್ಣ ನೀರಾವರಿ, ವಿಜ್ಞಾನ ಮತ್ತು
ತಂತ್ರಜ್ಞಾನ ಮಂತ್ರಿ

**ಎಂ.ಕೆ. ವಿಶಾಲಾಕ್ಷಿ**
ಕಾರ್ಯದರ್ಶಿ
ಕರ್ನಾಟಕ ವಿಧಾನಸಭೆ

## ಅನುಬಂಧ

## ಕರ್ನಾಟಕ ಅಂತರ್ಜಲ (ಅಭಿವೃದ್ಧಿ ಮತ್ತು ನಿರ್ವಹಣೆಯ ವಿನಿಯಮನ ಹಾಗೂ ನಿಯಂತ್ರಣ) ಅಧಿನಿಯಮ, 2011 (2011ರ ಕರ್ನಾಟಕದ ಅಧಿನಿಯಮ 25)ರ ಉದ್ಧೃತ ಭಾಗ

**XXX XXX XXX**

**3. ಅಂತರ್ಜಲ ಪ್ರಾಧಿಕಾರದ ರಚನೆ.- XXX XXX XXX**

**(3) ಪ್ರಾಧಿಕಾರವು ಈ ಮುಂದಿನ ಸದಸ್ಯರುಗಳನ್ನು ಹೊಂದಿರತಕ್ಕದು, ಎಂದರೆ:-**

(ಎ) ಸರ್ಕಾರದ ಕಾರ್ಯದರ್ಶಿ, ಜಲಸಂಪನ್ಮೂಲ ಇಲಾಖೆ, ಸಣ್ಣ ನೀರಾವರಿ, ಕರ್ನಾಟಕ ಸರ್ಕಾರ, ಇವರು ಅಧ್ಯಕ್ಷರಾಗಿರತಕ್ಕದ್ದು;

(ಬಿ) ಖನಿಜ ಮತ್ತು ಭೂವಿಜ್ಞಾನ ಆಯುಕ್ತರು ಅಥವಾ ನಿರ್ದೇಶಕರು, ಇವರು ಸದಸ್ಯ ಕಾರ್ಯದರ್ಶಿಯಾಗಿರತಕ್ಕದ್ದು;

(ಸಿ) ಕರ್ನಾಟಕ ಸರ್ಕಾರದ ಆರ್ಥಿಕ ಇಲಾಖೆಯ ಒಬ್ಬರು ಪ್ರತಿನಿಧಿ;

(ಡಿ) ಪ್ರಾದೇಶಿಕ ನಿರ್ದೇಶಕರು, ಕೇಂದ್ರ ಅಂತರ್ಜಲ ಮಂಡಳಿ, ಭಾರತ ಸರ್ಕಾರ;

(ಇ) ಪ್ರದೇಶದ ಮೇಲೆ ಅಧಿಕಾರ ವ್ಯಾಪ್ತಿಯುಳ್ಳ ವಿದ್ಯುತ್ ಸರಬರಾಜು ಕಂಪನಿಯ ಚೀಫ್ ಇಂಜಿನಿಯರ್ ದರ್ಜೆಗಿಂತ ಕಡಿಮೆಯಲ್ಲದ ಒಬ್ಬ ಪ್ರತಿನಿಧಿ;

(ಎಫ್) ಚೀಫ್ ಇಂಜಿನಿಯರ್, ಆರ್‌ಡಿಇಡಿ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ;

(ಜಿ) ಇಂಜಿನಿಯರ್ ಇನ್ ಚೀಫ್, ಜಲಸಂಪನ್ಮೂಲ ಇಲಾಖೆಯ ಜಲಸಂಪನ್ಮೂಲಗಳ ಅಭಿವೃದ್ಧಿ ಸಂಸ್ಥೆ;

(ಎಚ್) ರಾಜ್ಯ ಸರ್ಕಾರವು ನಾಮನಿರ್ದೇಶಿಸುವ ಚೀಫ್ ಇಂಜಿನಿಯರ್, ಸಣ್ಣ ನೀರಾವರಿ ;

(ಐ) ಅಧ್ಯಕ್ಷರು, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಲಿ;

(ಜೆ) ಕೃಷಿ ಆಯುಕ್ತರು / ನಿರ್ದೇಶಕರು, ಕೃಷಿ ಇಲಾಖೆ;

(ಕೆ) ಮುಖ್ಯ ಮಹಾ ಪ್ರಬಂಧಕ, ರಾಷ್ಟ್ರೀಯ ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಬ್ಯಾಂಕ್, ಬೆಂಗಳೂರು;

(ಎಲ್) ರಾಜ್ಯ ಸರ್ಕಾರವು ನಾಮನಿರ್ದೇಶಿಸುವ ನಾಲ್ಕು ಜನ ರೈತ ಪ್ರತಿನಿಧಿಗಳು;

(ಎಂ) ಚೀಫ್ ಇಂಜಿನಿಯರ್, ಕರ್ನಾಟಕ ನಗರ ನೀರು ಸರಬರಾಜು ಮತ್ತು ಅಭಿವೃದ್ಧಿ ಮಂಡಳಿ;

(ಎನ್) ಚೀಫ್ ಇಂಜಿನಿಯರ್, ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ;

(ಒ) ಸರ್ಕಾರವು ನಾಮನಿರ್ದೇಶಿಸುವ ಅಂತರ್ಜಲ ಸಂಬಂಧದ ವಿಷಯಗಳಲ್ಲಿ ವಿಶೇಷ ತಿಳುವಳಿಕೆ ಅಥವಾ ಪ್ರಾಯೋಗಿಕ ಅನುಭವ ಹೊಂದಿರುವ ಇಬ್ಬರು ಸದಸ್ಯರುಗಳು.

**XXX XXX XXX**

**11. ಅಧಿಸೂಚಿತ ಪ್ರದೇಶದಲ್ಲಿ ಅಂತರ್ಜಲವನ್ನು ತೆಗೆಯಲು ಮತ್ತು ಬಳಸಲು ಅನುಮತಿಯ ನೀಡಿಕೆ.-** (1) ಕುಡಿಯುವ ನೀರಿನ ಸಾರ್ವಜನಿಕ ಮೂಲಗಳ ಸಂರಕ್ಷಣೆಗೆ ಸಂಬಂಧಿಸಿದ ಯಾವುದೇ ಕಾನೂನಿನ ಉಪಬಂಧಗಳಿಗೊಳಪಟ್ಟು, ಯಾವೊಬ್ಬ ಅಂತರ್ಜಲ ಬಳಕೆದಾರನು, ವೈಯಕ್ತಿಕ ಅಥವಾ ಸಮುದಾಯದ ಬಳಕೆಯ ಯಾವುದೇ ಉದ್ದೇಶಕ್ಕಾಗಿ ಅಧಿಸೂಚಿತ ಪ್ರದೇಶದಲ್ಲಿ ಬಾವಿಯನ್ನು ಕೊರೆಯಲು ಅಥವಾ ತೋಡಲು ಇಚ್ಛಿಸಿದಲ್ಲಿ, ಆತನು ಈ ಉದ್ದೇಶಕ್ಕಾಗಿ ಅನುಮತಿಯನ್ನು ಕೋರಿ ಪ್ರಾಧಿಕಾರಕ್ಕೆ ಅರ್ಜಿಯನ್ನು ಸಲ್ಲಿಸತಕ್ಕದ್ದು ಮತ್ತು ಪ್ರಾಧಿಕಾರದಿಂದ ಅನುಮತಿಯನ್ನು ಪಡೆದ ಹೊರತು ಹಾಗೆ ಕೊರೆಯುವುದಕ್ಕೆ ಅಥವಾ ತೋಡುವುದಕ್ಕೆ ಸಂಬಂಧಿಸಿದ ಯಾವುದೇ ಚಟುವಟಿಕೆಗೆ ತೊಡಗತಕ್ಕದ್ದಲ್ಲ.

(2) (1)ನೇ ಉಪಪ್ರಕರಣದಡಿಯಲ್ಲಿನ ಪ್ರತಿಯೊಂದು ಅರ್ಜಿಯನ್ನು ಕೈಗಾರಿಕೆ, ವಾಣಿಜ್ಯ ಮನೋರಂಜನೆ, ಕೃಷಿ ಮತ್ತು ಗೃಹಕೃತ್ಯ ಮುಂತಾದ ಬೇರ ಬೇರೆ ಉದ್ದೇಶಗಳಿಗಾಗಿ, ಬೇರೆ ಬೇರೆ ಪ್ರದೇಶಗಳಿಗಾಗಿ ನಿಯಮಿಸಬಹುದಾದಂಥ ಶುಲ್ಕದ ಜೊತೆಗೆ, ಅಂಥ ವಿವರಗಳನ್ನೊಳಗೊಂಡು ಅಂಥ ರೀತಿಯಲ್ಲಿ ಹಾಗೂ ಅಂಥ ನಮೂನೆಯಲ್ಲಿ ಸಲ್ಲಿಸತಕ್ಕದ್ದು.

**XXX XXX XXX**

**17. ಅಂತರ್ಜಲ ಪ್ರಾಧಿಕಾರದ ಅಧಿಕಾರಗಳು.-** (1) ಪ್ರಾಧಿಕಾರವು ಅಥವಾ ಈ ಬಗ್ಗೆ ಅದರಿಂದ ಲಿಖಿತದ ಅಧಿಕಾರ ಪಡೆದ ಯಾವೊಬ್ಬ ವ್ಯಕ್ತಿಯು ಈ ಮುಂದಿನ ಅಧಿಕಾರಗಳನ್ನು ಹೊಂದಿರತಕ್ಕದ್ದು:-

(ಎ) ಯಾವುದೇ ಸ್ವತ್ತಿನೊಳಕ್ಕೆ ಯಾವುದೇ ಸಮಂಜಸ ಸಮಯದಲ್ಲಿ ಪ್ರವೇಶಿಸುವುದು ಮತ್ತು ಸಂಬAಧಿಸಿದ ಭೂಮಿಯ ಅಥವಾ ಭೂಮಿಯ ಮೇಲ್ಮೈಯಲ್ಲಿ ಅಥವಾ ಭೂಮಿಯ ಅಂತರಾಳದಲ್ಲಿ ಇರುವ ನೀರಿನ ಪರಿಶೀಲನೆ ಮಾಡುವುದು ಹಾಗೂ ಅದರ ಯಾವುದೇ ಅಳತೆಯನ್ನು ತೆಗೆದುಕೊಳ್ಳುವುದು;

(ಬಿ) ನಿರ್ಮಿಸಲಾದ ಅಥವಾ ಕೊರೆಯಲಾದ ಅಥವಾ ಈಗಾಗಲೇ ಕೊರೆದಿರುವ ಬಾವಿಯನ್ನು ಮತ್ತು ಅದರಿಂದ ಅಗೆದು ತೆಗೆದ ಮಣ್ಣು ಹಾಗೂ ಇತರ ವಸ್ತುಗಳನ್ನು ಪರೀಕ್ಷಿಸುವುದು;

(ಸಿ) ಅಂಥ ಬಾವಿಯಿಂದ ಹೊರತೆಗೆದ ಅಂಥ ಮಣ್ಣಿನ ಅಥವಾ ಇತರ ವಸ್ತುಗಳ ಅಥವಾ ನೀರಿನ ಮಾದರಿಗಳನ್ನು ಪಡೆಯುವುದು;

(ಡಿ) ಬಾವಿಯನ್ನು ಕೊರೆಯುತ್ತಿರುವ ಅಥವಾ ತೋಡುತ್ತಿರುವ ವ್ಯಕ್ತಿಯು ಅದರಿಂದ ತೆಗೆದ ಮಣ್ಣಿನ ಅಥವಾ ಯಾವುವೇ ವಸ್ತುಗಳ ಮಾದರಿಯನ್ನು, ಕೆಲಸವನ್ನು ಪೂರ್ಣಗೊಳಿಸಿದ ಅಥವಾ ಬಿಟ್ಟುಬಿಟ್ಟ ದಿನಾಂಕದಿಂದ ಮೂರು ತಿಂಗಳಿಗೆ ಮೀರದಂಥ ಅವಧಿಯವರೆಗೆ, ನಿಯಮಿಸಲಾದ ರೀತಿಯಲ್ಲಿ ಪ್ರಾಧಿಕಾರವು ನಿರ್ದಿಷ್ಟಪಡಿಸಬಹುದಾದಂತೆ ಇಡಬೇಕೆಂದು ಮತ್ತು ಸಂರಕ್ಷಿಸಬೇಕೆಂದು ಲಿಖಿತ ಆದೇಶ ನೀಡುವುದು ಮತ್ತು ಆ ತರುವಾಯ ಅಂಥ ವ್ಯಕ್ತಿಯು ಹಾಗೆ ಅಗತ್ಯ ಪಡಿಸಿದ್ದನ್ನು ಪಾಲಿಸತಕ್ಕದ್ದು;

(ಇ) ಈ ಅಧಿನಿಯಮದ ಉದ್ದೇಶಗಳನ್ನು ಕಾರ್ಯಗತಗೊಳಿಸಲು ಸಂಬಂಧಿಸಿದ ದಾಖಲೆ ಅಥವಾ ದಸ್ತಾವೇಜುಗಳ ಪ್ರತಿಗಳನ್ನು ಪರೀಕ್ಷಿಸುವುದು ಮತ್ತು ಪಡೆಯುವುದು ಹಾಗೂ (ಕೊರೆಯುತ್ತಿರುವ ಅಥವಾ ತೋಡುತ್ತಿರುವ ಅಥವಾ ತೋಡಿದ ಬಾವಿಯ ವ್ಯಾಸ ಅಥವಾ ಆಳ, ಎಷ್ಟು ಆಳ ಅಗೆದಾಗ ನೀರು ಸಿಕ್ಕಿತು ಹಾಗೂ ತದನಂತರ ಯಾವ ಆಳಕ್ಕೆ ನೀರು ತುಂಬಿ ನಿಂತಿತು, ಬಾವಿಯನ್ನು ತೋಡುತ್ತಿರುವಾಗ ಸಿಕ್ಕ ವಿವಿಧ ಭೂ ಪದರುಗಳ ಮಾದರಿ ಮತ್ತು ನೀರಿನ ಗುಣಮಟ್ಟ ಇವುಗಳು ಒಳಗೊಂಡಂತೆ) ಯಾವುದೇ ಮಾಹಿತಿಯನ್ನು ಪಡೆಯಲು ಅವಶ್ಯಕವಾದ ಯಾವುದೇ ಪ್ರಶ್ನೆಯನ್ನು ಕೇಳುವುದು ;

(ಎಫ್) ಅಂತರ್ಜಲದ ಯಾವೊಬ್ಬ ಬಳಕೆದಾರನು ಅಥವಾ ಬಾವಿ ಕೊರೆಯುವ ಅಥವಾ ತೋಡುವ ಏಜೆನ್ಸಿಯು ನಿಯಮಿಸಬಹುದಾದಂಥ ಮಾಹಿತಿಯನ್ನು ಅಥವಾ ವರದಿಗಳನ್ನು ಅಂಥ ನಮೂನೆಯಲ್ಲಿ ಅಂಥ ಕಾಲಾಂತರಗಳಲ್ಲಿ ಮತ್ತು ಅಂಥ ವಿವರಗಳೊಂದಿಗೆ ಒದಗಿಸಬೇಕೆಂದು

ಅಗತ್ಯಪಡಿಸುವ ಒಂದು ನೋಟೀಸನ್ನು ಜಾರಿ ಮಾಡುವುದು ಅಥವಾ ಜಾರಿ ಮಾಡುವಂತೆ ಮಾಡುವುದು ಮತ್ತು ಹಾಗೆ ಜಾರಿ ಮಾಡಿದಾಗ ಆ ಬಳಕೆದಾರನು ಅಥವಾ ಬಾವಿ ಕೊರೆಯುವ ಅಥವಾ ತೋಡುವ ಏಜೆನ್ಸಿಯು ಅಗತ್ಯ ಪಡಿಸಿದಂಥ ಅಂಶಗಳನ್ನು ಪಾಲಿಸತಕ್ಕದ್ದು;

(ಜಿ) ನೀರಿನ ಬಳಕೆಯ ಆಡಳಿತವನ್ನು ಸರಿಯಾಗಿ ಮಾಡಲು ಅಥವಾ ಅಂತರ್ಜಲ ಬಳಕೆದಾರನು ಈ ಅಧಿನಿಯಮದ ಉಪಬಂಧಗಳನ್ನು ಅಥವಾ ಅದರ ಅಡಿಯಲ್ಲಿ ರಚಿಸಿದ ನಿಯಮಗಳನ್ನು ಪಾಲಿಸುತ್ತಿಲ್ಲ ಎಂದು ನಂಬಲು ಕಾರಣಗಳಿದ್ದರೆ ಅಥವಾ ಯಾವುದೇ ಇತರ ಸೂಕ್ತ ಕಾರಣಗಳಿಗಾಗಿ ಅವಶ್ಯಕವಿದ್ದರೆ ಜಲ ಮಾಪನ ಸಾಧನವನ್ನು ಅಳವಡಿಸುವಂತೆ ಅಂತರ್ಜಲ ಬಳಕೆದಾರನನ್ನು ಅಗತ್ಯಪಡಿಸುವುದು:

ಪರಂತು, ಅಂತರ್ಜಲ ಬಳಕೆದಾರನು ತನಗೆ ನೀಡಿದ ನಿರ್ದೇಶನಗಳನ್ನು ಮೂವತ್ತು ದಿನಗಳ ಅವಧಿಯೊಳಗೆ ಪಾಲಿಸದಿದ್ದಲ್ಲಿ, ಪ್ರಾಧಿಕಾರವು ತಾನಾಗಿಯೇ ಅಂಥ ಜಲ ಮಾಪನ ಸಾಧನವನ್ನು ಅಳವಡಿಸಬಹುದು ಮತ್ತು ಹಾಗೆ ಪಾಲಿಸಲು ತಪ್ಪಿದ ಅಂತರ್ಜಲ ಬಳಕೆದಾರನಿಂದ ವೆಚ್ಚವನ್ನು ವಸೂಲು ಮಾಡಬಹುದು.

(ಎಚ್) ಕಾನೂನುಬಾಹಿರವಾಗಿ ಬಾವಿಯನ್ನು ಕೊರೆಯಲು ಅಥವಾ ತೋಡಲು ಮತ್ತು ಅಂತರ್ಜಲವನ್ನು ತೆಗೆಯಲು ಉಪಯೋಗಿಸಿದ ಯಾವುದೇ ಯಂತ್ರೋಪಕರಣಗಳನ್ನು ಜಪ್ತಿಮಾಡುವುದು ಮತ್ತು ನಿರ್ವಹಿಸಲಾದ ಕಾಮಗಾರಿಯನ್ನು ಭಾಗಶಃ ಅಥವಾ ಪೂರ್ಣವಾಗಿ ನಾಶಪಡಿಸುವುದು.

(ಐ) ಈ ಅಧಿನಿಯಮದ ಉಪಬಂಧಗಳನ್ನು ಮತ್ತು ಅದರ ಅಡಿಯಲ್ಲಿ ರಚಿಸಿದ ನಿಯಮಗಳನ್ನು ಪಾಲಿಸದ ಯಾವೊಬ್ಬ ಅಂತರ್ಜಲ ಬಳಕೆದಾರನನ್ನು ಯಾವುದೇ ಅಂತರ್ಜಲವನ್ನು ಮೇಲೆ ತೆಗೆಯುವುದನ್ನು ನಿಲ್ಲಿಸಬೇಕೆಂದು, ಅದಕ್ಕೆ ವಿದ್ಯುತ್ ಸರಬರಾಜನ್ನು ಕಿತ್ತುಹಾಕಬೇಕೆಂದು ಅಥವಾ ಈ ಅಧಿನಿಯಮದ ಅಥವಾ ಅದರ ಅಡಿಯಲ್ಲಿ ರಚಿಸಿದ ನಿಯಮಗಳ ಮೇರೆಗೆ ಕಾನೂನು ಬಾಹಿರವೆಂದು ಕಂಡುಬಂದ ಯಾವುದೇ ಹೈಡ್ರಾಲಿಕ್ ಕಾಮಗಾರಿಯನ್ನು ವಶಪಡಿಸಿಕೊಳ್ಳಬೇಕೆಂದು ಅಗತ್ಯಪಡಿಸುವುದು:

ಪರಂತು, ಅಂತರ್ಜಲ ಬಳಕೆದಾರನು ತನಗೆ ನೀಡಿದ ನಿರ್ದೇಶನಗಳನ್ನು ಅಂಥ ಕಡ್ಡಾಯ ಕೋರಿಕೆಯನ್ನು ಹೊರಡಿಸಿದ ದಿನಾಂಕದಿಂದ ಅರವತ್ತು ದಿನಗಳ ಅವಧಿಯೊಳಗೆ ಪಾಲಿಸದಿದ್ದಲ್ಲಿ, ಪ್ರಾಧಿಕಾರವು ತಾನಾಗಿಯೇ ಅವಶ್ಯಕ ಕಾಮಗಾರಿಯನ್ನು ಕೈಗೊಳ್ಳಬಹುದು ಮತ್ತು ಕಾನೂನುಬಾಹಿರ ಅಂತರ್ಜಲ ಬಳಕೆದಾರನಿಂದ ಅದರ ವೆಚ್ಚವನ್ನು ವಸೂಲು ಮಾಡಬಹುದು.

(ಜೆ) ಈ ಅಧಿನಿಯಮದ ಅಡಿಯಲ್ಲಿನ ಅಪರಾಧವನ್ನು ಮಾಡಲಾಗಿದೆ ಅಥವಾ ಮಾಡಲಾಗುತ್ತಿದೆ ಎಂದು ತಾನು ನಂಬಲು ಕಾರಣಗಳಿರುವ ಯಾವುದೇ ಸ್ಥಳವನ್ನು ತಾನು ಅವಶ್ಯಕವೆಂದು ಭಾವಿಸಬಹುದಾದಂಥ ನೆರವಿನೊಂದಿಗೆ ಎಲ್ಲಾ ಸೂಕ್ತ ಸಮಯದಲ್ಲಿ ಪ್ರವೇಶಿಸುವುದು ಮತ್ತು ಶೋಧಿಸುವುದು ಮತ್ತು ಅಪರಾಧವನ್ನು ಮಾಡಿದ ಅಥವಾ ಮಾಡುತ್ತಿರುವ ವ್ಯಕ್ತಿಗೆ ಮೂವತ್ತು ದಿನಗಳಿಗೆ ಮೀರದ ಒಂದು ನಿರ್ದಿಷ್ಟ ಅವಧಿಯಲ್ಲಿ ಅಂತರ್ಜಲವನ್ನು ತೆಗೆಯದಂತೆ ಅಥವಾ ಬಳಸದಂತೆ ಲಿಖಿತದಲ್ಲಿ ಆದೇಶಿಸುವುದು;

(ಕೆ) ಈ ಅಧಿನಿಯಮದ ಅಥವಾ ಅದರ ಅಡಿಯಲ್ಲಿ ರಚಿಸಿದ ನಿಯಮಗಳ ಉದ್ದೇಶಗಳನ್ನು ಈಡೇರಿಸುವುದಕ್ಕಾಗಿ ನಿಯಮಿಸಬಹುದಾದ ಅಥವಾ ಅವಶ್ಯಕವಾಗಬಹುದಾದಂಥ ಇತರ ಅಧಿಕಾರಗಳನ್ನು ಚಲಾಯಿಸುವುದು.

**XXX XXX XXX**

**18. ಪ್ರಾಧಿಕಾರದ ನಿಧಿಗಳು.- XXX XXX XXX**

(3) ಪ್ರಾಧಿಕಾರವು, ಸರ್ಕಾರದ ಅನುಮೋದನೆಯೊಂದಿಗೆ ಕೈಗಾರಿಕೆ, ವಾಣಿಜ್ಯ ಮತ್ತು ಮನೋರಂಜನೆ ಉದ್ದೇಶಗಳಿಗಾಗಿ ತೆಗೆಯಲಾದ ಅಂತರ್ಜಲದ ಪ್ರಮಾಣದ ಮೇಲೆ ನಿಯಮಿಸಬಹುದಾದಂಥ ರೀತಿಯಲ್ಲಿ ಸೂಕ್ತ ದರಗಳನ್ನು ವಿಧಿಸಬಹುದು.

**XXX XXX XXX**

**32. ಅಪರಾಧಗಳು ಮತ್ತು ದಂಡಗಳು.-** (1) ಯಾವೊಬ್ಬ ಅಂತರ್ಜಲದ ಬಳಕೆದಾರನು ಅಥವಾ ಬಾವಿ ಕೊರೆಯುವ/ತೋಡುವ ಏಜೆನ್ಸಿಯು,-

(ಎ) ಪ್ರಾಧಿಕಾರಕ್ಕೆ ಅಥವಾ ಅದರಿಂದ ಅಧಿಕಾರ ಪಡೆದ ಯಾವೊಬ್ಬ ಇತರ ವ್ಯಕ್ತಿಗೆ ಈ ಅಧಿನಿಯಮದ ಅಡಿಯಲ್ಲಿನ ಯಾವುದೇ ಅಧಿಕಾರಗಳನ್ನು ಚಲಾಯಿಸಲು ಅಡ್ಡಿಪಡಿಸಿದರೆ, ಅಥವಾ

(ಬಿ) 17ನೇ ಪ್ರಕರಣದ (1)ನೇ ಉಪ-ಪ್ರಕರಣದ (ಎಫ್) ಖಂಡದ ಅಡಿಯಲ್ಲಿ ಯಾವುದೇ ಮಾಹಿತಿ ಅಥವಾ ವಿವರ ಪತ್ರವನ್ನು ಒದಗಿಸಲು ಅಗತ್ಯಪಡಿಸಲಾಗಿದ್ದು,-

(i) ಅಂಥ ಮಾಹಿತಿ ಅಥವಾ ವಿವರಪತ್ರವನ್ನು ಒದಗಿಸಲು ಉದ್ದೇಶ ಪೂರ್ವಕವಾಗಿ ನಿರಾಕರಿಸಿದರೆ ಅಥವಾ ಕಾನೂನು ಬದ್ದ ಕಾರಣವಿಲ್ಲದೇ ಉಪೇಕ್ಷಿಸಿದರೆ ; ಅಥವಾ

(ii) ಯಾವುದೇ ಮಾಹಿತಿ ಅಥವಾ ವಿವರ ಪತ್ರವನ್ನು ಅದು ಸುಳ್ಳು ಎಂಬುದಾಗಿ ತಿಳಿದೂ ಉದ್ದೇಶ ಪೂರ್ವಕವಾಗಿ ಒದಗಿಸಿದರೆ ಅಥವಾ ಒದಗಿಸಲು ಕಾರಣನಾದರೆ ;

- ಐದು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಗೆ ಮತ್ತು / ಅಥವಾ ಆರು ತಿಂಗಳುಗಳ ಅವಧಿಗೆ ವಿಸ್ತರಿಸಬಹುದಾದ ಕಾರಾವಾಸ ಶಿಕ್ಷೆಗೆ ಅಥವಾ ಅವೆರಡಕ್ಕೂ ಗುರಿಯಾಗತಕ್ಕದ್ದು. ಉಲ್ಲಂಘನೆಯು ಮುಂದುವರಿದ ಸಂದರ್ಭದಲ್ಲಿ ಮತ್ತು ತರುವಾಯದ ವಿಫಲತೆ ಅಥವಾ ಉಲ್ಲಂಘನೆಯ ಸಂದರ್ಭದಲ್ಲಿ ಹಾಗೆ ಆ ವಿಫಲತೆಯು ಅಥವಾ ಉಲ್ಲಂಘನೆಯು ಮುಂದುವರೆದ ಪ್ರತಿದಿನಕ್ಕೆ ನೂರು ರೂಪಾಯಿಗಳಿಗೆ ವಿಸ್ತರಿಸಬಹುದಾದ ಹೆಚ್ಚುವರಿ ಜುಲ್ಮಾನೆಯೊಂದಿಗೆ ದಂಡಿತನಾಗತಕ್ಕದ್ದು.

**XXX XXX XXX**

**KARNATAKA LEGISLATIVE ASSEMBLY**

**SIXTEENTH LEGISLATIVE ASSEMBLY**

**SEVENTH SESSION**

## THE KARNATAKA GROUND WATER (REGULATION AND CONTROL OF DEVELOPMENT AND MANAGEMENT) (AMENDMENT) BILL, 2025

## (LA Bill No. 43 of 2025)

A Bill further to amend the Karnataka Ground water (Regulation and Control of Development and Management) Act, 2011.

Whereas it is expedient further to amend the Karnataka Ground water (Regulation and Control of Development and Management) Act, 2011 (Karnataka Act 25 of 2011), for the purposes hereinafter appearing.

Be it enacted by the Karnataka State Legislature in the seventy-sixth year of the Republic of India as follows:

**1. Short title and commencement.** (1) This Act may be called the Karnataka Ground Water (Regulation and Control of Development and Management) (Amendment) Act, 2025.

(2) It shall come into force at once.

**2. Amendment of section 3.** In the Karnataka Ground Water (Regulation and Control of Development and Management) Act, 2011 (Karnataka Act 25 of 2011) (hereinafter referred to as the principal Act), in section 3, in sub section (3),-

(i) for clause (a), the following shall be substituted, namely:-

"(a) The Secretary to Government incharge of the Minor Irrigation and Ground water development, Government of Karnataka who shall be the chair person."

(ii) for clause (b), the following shall be substituted, namely:-

"(b) The Director, Groundwater Directorate, who shall be the Member Secretary."

(iii) for clause (f), the following shall be substituted, namely:-

"(f) The Chief Engineer, Rural Drinking Water and Sanitation Department."

(iv) for clause (h), the following shall be substituted, namely:-

"(h) The Chief Engineer of south zone, Minor Irrigation and Groundwater Development Department."

**3. Amendment of section 11.-** In the principal Act, in section 11,-

(i) For the heading, the following shall be substituted, namely:-

**"11. Grant of permit to extract and use of Ground Water in Notified and Non-Notified Areas**.",

(ii) For sub-section (1), the following shall be substituted, namely:-

"(1) Subject to the provisions of any other law for time being in force relating to the protection of public sources of drinking water, no groundwater user, except those exempted under sub-section (1-A), shall drill or dig a well or extract, for any purpose in a notified and Non notified area without obtaining permit or No Objection Certificate from the Authority.

(1-A). Categories of consumers who are exempted from obtaining permission or No Objection Certificate. The following categories of consumers shall be exempted from Obtaining Permit for drilling new Borewell and seeking No Objection Certificate for ground water extraction namely:-

(i) Individual domestic consumers in both rural and urban areas for drinking water and domestic uses;

(ii) Rural drinking water supply schemes;

(iii) Armed Forces Establishments and Central Armed Police Forces establishments in both rural and urban areas;

(iv) Agricultural activities;

(v) All industries or mining projects or infrastructure projects drawing groundwater only for drinking or domestic purposes up to 5 Cum per day in all assessment units, and

(vi) Residential apartments and group housing societies who drill or dig,-

(a) For drinking water and domestic uses, drawing ground water up to 20 m3 per day subject to the conditions specified in the guidelines; and

(b) Dwelling units for Economically Weaker Sections under the Government schemes.

(1-B) All private tankers abstracting ground water and use it for supply as bulk water suppliers shall have No Objection Certificate for ground water abstraction from the concerned authority as notified by the Government."

**4. Amendment of section 17.**- In the Principal Act, in section 17, in sub-section (1), after clause (j), the following new clauses shall be inserted, namely:-

"(j-1) to issue, adopt and notify the guidelines issued by central groundwater authority for regulating and controlling the ground water extraction with suitable modifications;

(j-2) to constitute the district committee or any committee for any area to implement the purpose of this Act; and

(j-3) to constitute a sub-committee consist of one or more members, experts from among themselves or outsiders to suggest or advice the authority in proper regulation or use of groundwater or in any other matter."

**5. Amendment of section 18.-** In the Principal Act, in section 18, for sub-section (3), the following shall be substituted, namely:-

"(3) The authority may impose appropriate charges on the quantum of ground water extracted for the use of commercial, industrial, mining projects, infrastructure projects and bulk water supply as notified by the Government on the basis of guidelines issued by the Central Ground Water Authority."

**6. Amendment of section 32.-** In the Principal Act, in section 32,-

(i) in sub-section (1),for clause (b), the following shall be substituted, namely:-

"(b) having been required to furnish any information or return under clause (f) of sub-section (1) of section 17 of this Act:

(i) Willfully refuses or without lawful excuse, neglects to furnish such information or return; or

(ii) Willfully furnishes or causes to be furnished any information or return which he knows to be false:

- Shall be liable for punishment with penalty which may extend to Fifty thousand rupees. In the case of continuing and subsequent failure or contravention, an additional Penalty which may extend to one thousand rupees for every day during which such failure or contravention continues, shall be imposed."

(ii) in sub-section (2), for the words "five thousand," the words "twenty five thousand", shall be substituted;

(iii) in sub-section (4), for the words "ten thousand", the words "twenty five thousand", shall be substituted; and

(iv) after sub-section (4), the following shall be inserted, namely:-

"(5) Any person extracts the water without obtaining valid No Objection Certificate and violates the provisions of this Act and said No Objection Certificate, punishable with penalty as notified by the Government on the basis of guidelines issued by the Central Ground Water Authority, with suitable modifications."

## STATEMENT OF OBJECTS AND REASONS

It is considered necessary to amend the Karnataka Ground water (Regulation and Control of Development and Management) Act, 2011(Karnataka Act 25 of 2011) to,-

(i) give effect to the Budget Speech of Budget 2025-26;

(ii) carry out the recommendations of the Administrative Reforms Commission-2;

(iii) adopt the guidelines issued by the Central Ground Water Authority, New Delhi; and

(iv) adopt the provisions on the lines of the Jan Vishwas (Amendment of Provisions) Act, 2023 (Central Act 18 of 2023).

Hence, the Bill.

## FINANCIAL MEMORANDUM

There is no extra expenditure involved in the proposed legislative measure.

**N.S. BOSERAJU**
Minister for Minor Irrigation and
Science and Technology

**M.K. VISHALAKSHI**
Secretary
Karnataka Legislative Assembly

**ANNEXURE**

**THE KARNATAKA GROUND WATER (REGULATION AND CONTROL OF DEVELOPMENT AND MANAGEMENT) ACT, 2011**

**KARNATAKA ACT NO 25 OF 2011**

**XXX XXX XXX**

**3. Establishment of Groundwater Authority.- XXX XXX XXX**

(3) The Authority shall consist of the following members, namely:-

(a) The Secretary to Government in charge of the Department of Water resources, Minor Irrigation, Government of Karnataka who shall be the chairperson.

(b) The Commissioner or Director of Mines and Geology, who shall be the Member Secretary.

(c) A representative of the Finance Department, Government of Karnataka.

(d) The Regional Director, Central Groundwater Board, Government of India.

(e) One representative from the Electrical Supply Company having jurisdiction over the area, not below the rank of a Chief engineer.

(f) The Chief Engineer, RDED, Rural Development and Panchayat Raj Department.

(g) The Engineer-in-Chief, Water Resources Development Organization of Water Resources Department.

(h) The Chief Engineer, Minor Irrigation, nominated by the Government.

(i) The Chairman of the Karnataka State Pollution Control Board.

(j) The Commissioner/Director of Agriculture, Department of Agriculture.

(k) The Chief General Manager, National Bank for Agriculture and Rural Development, Bangalore.

(l) Four representative of farmers to be nominated by the Government.

(m) The Chief Engineer, the KUWS&DB.

(n) The Chief Engineer, the BWSSB.

(o) Two members who have special knowledge or practical experience in matters relating to groundwater to be nominated by the Government.

**XXX XXX XXX**

**11. Grant of permit to extract and use groundwater in the notified area.-** (1) Subject to the provisions of any law relating to protection of public sources of drinking water, any user of ground water desiring to drill or dig a well in the notified area for any purpose either on personal or community basis shall apply to the authority for grant of permit for this purpose and shall not proceed with any activity connected with such drilling or digging unless a permit has been granted by the authority.

(2) Every application under sub-section (1) shall be made in such form, shall contain such particulars and in such manner accompanied by such fee for

different purposes like industrial, commercial entertainment, agricultural and domestic etc., and for different areas, as may be prescribed.

**XXX** **XXX** **XXX**

**17. Powers Of The Authority.-** (1) The authority or any person authorized by it in writing in this behalf shall have power,-

(a) to enter at any reasonable time on any property and to investigate and take any measurement concerning the land or water located on the surface or underground;

(b) to inspect the well which is being constructed or drilled or has been drilled and the soils and other materials excavated there from;

(c) to take the specimens of such soils or other materials or of water extracted from such well;

(d) to order in writing the person drilling or digging a well to keep and preserve in the prescribed manner specimen of soil or any material excavated there from for such period not exceeding three months from the date of completion or abandonment of the work as may be specified by the authority and thereupon such person shall comply with such requisition;

(e) to inspect and to take copies of the relevant record or documents and to ask any question necessary for obtaining any information (including, diameter or depth of the well which is being or has been sunk, the level at which the water is or was struck and subsequently restored or rested the types of strata encountered in the drilling or digging of the well and quality of the water struck etc.,) required for carrying out the purposes of this Act;

(f) to serve or cause to be served a notice requiring any user of groundwater or drilling or digging agency to furnish such information or returns in such form, at such intervals and with such particulars, as may be prescribed and thereupon such user or drilling or digging agency shall comply with such requisition;

(g) to require the user of groundwater to install water measuring, devices if it is necessary to properly administer the water or there is reason to believe that the user of groundwater does not comply with the provisions of this act or the rules made thereunder or for any other sufficient reason:

provided that, where the user of groundwater does not comply with the direction issued to him within a period of thirty days, from the date of issue of such requisition the authority itself may install such water-measuring device and recover the cost from the defaulting user of groundwater;

(h) to seize any mechanical equipment or device utilized for illegal drilling or digging of well and extraction of groundwater and to demolish the work executed fully or partly;

R.N.I. No. KARBIL/2001/47147 POSTAL REGN. No. RNP/KA/BGS/2202/2017-19
Licensed to post without prepayment WPP No. 297


(i) to direct any user of groundwater who does not comply with the provisions of this act and the rules framed there under to close down the extraction of ground water, disconnect its power supply or confiscate any hydraulic work found to be illegal according to the provisions of this act and the rules made thereunder:

provided that, where the user of groundwater does not comply with the direction issued to him within a period of sixty days, from the date of issue of such requisition the authority itself may carry out the necessary work and recover the cost from the illegal user of groundwater;

(j) to enter and search at all reasonable times with such assistance, if any, as it considers necessary, any place in which it has reason to believe that offence under this act has been or is being committed and to order in writing the person who has or is committing the offence not to extract or use the groundwater for a specified period not exceeding thirty days;

(k) to exercise such other powers as may be prescribed or as may be necessary for carrying out the purposes of this act or any rules made thereunder.

**XXX XXX XXX**

**18. Funds of the Authority.-XXX XXX XXX**

(3) The Authority may impose appropriate charges on the quantum of ground water extracted for industrial, commercial and entertainment purposes with the approval of the government in such manner as may be prescribed.

**XXX XXX XXX**

**32. Offences and penalties.-** (1) any person or drilling or digging agency who,-

(a) obstructs the authority or any other person authorized by it to exercise any of the powers under this act; or

(b) having been required to furnish any information or return under clause (f) of sub-section (1) of section 17:

(i) wilfully refuses or without lawful excuse, neglects to furnish such information or return; or

(ii) wilfully furnishes or causes to be furnished any information or return which he knows to be false;

shall be liable for punishment with fine which may extend to five thousand rupees and/or imprisonment for a term which may extend to six months or both. in the case of continuing and subsequent failure or contravention, an additional fine which may extend to one hundred rupees for every day during which such failure or contravention continues, shall be imposed.

**XXX XXX XXX**

ಮುದ್ರಕರು ಹಾಗೂ ಪ್ರಕಾಶಕರು:- ಸಂಕಲನಾಧಿಕಾರಿಗಳು, ಕರ್ನಾಟಕ ರಾಜ್ಯಪತ್ರ, ಸರ್ಕಾರಿ ಕೇಂದ್ರ ಮುದ್ರಣಾಲಯ, ಬೆಂಗಳೂರು
THAMMAIAH